ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

16

ಇಲಾಖೆ / ವಿಷಯ : DEPARTMENT / SUBJECT: ವಿಧಾನಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE: 19/11/20

# ಬೆಳಗಾವಿಯಲ್ಲಿಲ್ಲ ಅಧಿವೇಶನ

19/11/20

ಸಂ.ಕ.ಸಮಾಚಾರ ಬೆಂಗಳೂರು

ಕೋಟ್ಯಂತರ ರೂಪಾಯಿ ವ್ಯಯಿಸಿ ಬೆಳಗಾವಿಯಲ್ಲಿ ನಿರ್ಮಿಸಿರುವ ಸುವರ್ಣಸೌಧಕ್ಕೆ ಈ ವರ್ಷವೂ ವಿಧಾನಸಭಾ ಅಧಿವೇಶನದ ಭಾಗ್ಯ ಸಿಗುತ್ತಿಲ್ಲ. ಕಳೆದ ಸಾಲಿನಲ್ಲಿ ಪ್ರವಾಹ ಅಡ್ಡಿಯಾದರೆ ಈ ವರ್ಷ ಕೊರೊನಾ ಕಾರಣದಿಂದಾಗಿ ಚಳಿಗಾಲದ ಅಧಿವೇಶನ ಬೆಂಗಳೂರಿನಲ್ಲೇ ನಡೆಯಲಿದೆ.

- **ಸತತ 2ನೇ ವರ್ಷ ಅಧಿವೇಶನ ವಂಚಿತ ಬೆಳಗಾವಿ**
- **ಸುವರ್ಣಸೌಧಲ್ಲಿಲ್ಲ ಸಂಭ್ರಮದ ಕಳೆ**
- **ಈ ಬಾರಿ ಕೊರೊನಾ ಸೋಂಕಿನ ಪಿಡುಗು ಕಾರಣ**

ಉತ್ತರಕರ್ನಾಟಕಕ್ಕೆ ಆಡಳಿತಯಂತ್ರ ಸ್ಥಳಾಂತರ ಆಗಬೇಕು. ಆ ಮೂಲಕ ಈ ಭಾಗವನ್ನು ನಿರ್ಲಕ್ಷಿಸಲಾಗುತ್ತಿದೆ ಎಂಬ ಮನೋಭಾವವನ್ನು ದೂರಮಾಡಲು ರಾಜ್ಯ ಸರ್ಕಾರ ಬೆಳಗಾವಿಯಲ್ಲಿ ಸುವರ್ಣಸೌಧ ನಿರ್ಮಿಸಿತ್ತಲ್ಲದೆ ಪ್ರತೀ ವರ್ಷವೂ ಡಿಸೆಂಬರ್‌ನಲ್ಲಿ ಚಳಿಗಾಲದ ಅಧಿವೇಶನವನ್ನು ಇಲ್ಲಿಯೇ ನಡೆಸುವ ಪರಿಪಾಠ ಮುಂದುವರೆಸಿಕೊಂಡು ಬರಲಾಗಿತ್ತು.

ಆದರೆ ಬೆಳಗಾವಿಯಲ್ಲಿ 2018ರಲ್ಲಿ ಚಳಿಗಾಲ ಅಧಿವೇಶನ ನಡೆದಿದ್ದೇ ಅಂತಿಮ. ಕಳೆದ ವರ್ಷ ಉತ್ತರಕರ್ನಾಟಕದಲ್ಲಿ ಭಾರೀ ಪ್ರಮಾಣದಲ್ಲಿ ಪ್ರವಾಹ ಕಂಡುಬಂದಿದ್ದ ಹಿನ್ನೆಲೆಯಲ್ಲಿ, ಅಧಿವೇಶನ ನಡೆದಲ್ಲಿ ಅಧಿಕಾರಿಗಳು ಸಂತ್ರಸ್ತರಿಗೆ ಪರಿಹಾರ ವಿತರಣೆಯಲ್ಲಿ ವಿಳಂಬವಾಗಲಿದೆ ಎಂಬ ಕಾರಣಕ್ಕೆ ಅಧಿವೇಶನವನ್ನು ಬೆಂಗಳೂರಿನಲ್ಲಿಯೇ ನಡೆಸಲು ನಿರ್ಧರಿಸಲಾಗಿತ್ತು. ಇದೀಗ 2020ರಲ್ಲಿಯೂ ಮತ್ತದೇ ಪುನರಾವರ್ತನೆ ಆಗಿದೆ. ಬುಧವಾರ ಸಿಎಂ ಯಡಿಯೂರಪ್ಪ ನೇತೃತ್ವದಲ್ಲಿ ನಡೆದ ಸಚಿವಸಂಪುಟ ಸಭೆ ಡಿಸೆಂಬರ್ 7 ರಿಂದ 15ರವರೆಗೆ ನಡೆಯಲಿರುವ ಚಳಿಗಾಲದ ಅಧಿವೇಶನವನ್ನು ಬೆಳಗಾವಿಗೆ ಬದಲಿಗೆ ಬೆಂಗಳೂರಿನಲ್ಲಿಯೇ ನಡೆಸಲು ತೀರ್ಮಾನಿಸಿದೆ.



‘ಉತ್ತರ ಕರ್ನಾಟಕ ಭಾಗದ ಜನರ ಸಮಸ್ಯೆಗಳಿಗೆ ಸ್ಪಂದಿಸಲು ಸುವರ್ಣಸೌಧದಲ್ಲೇ ಸರ್ಕಾರ ಅಧಿವೇಶನ ನಡೆಸಬೇಕಿತ್ತು. ಪ್ರಮುಖ ಇಲಾಖಾ ಕಚೇರಿಯೂ ಇಲ್ಲಿಗೆ ಸ್ಥಳಾಂತರವಾಗಿಲ್ಲ. ಹಾಗಾಗಿ ಸುವರ್ಣಸೌಧ ಬೆದರುಬೊಂಬೆ ಎನ್ನುವಂತಾಗಿದೆ.

■ **ಎಸ್.ಆರ್.ಪಾಟೀಲ್** | ಮೇಲ್ಮನೆ ಪ್ರತಿಪಕ್ಷನಾಯಕ